**A**

**CCE RR/PR/PF/ NSR/NSPR**
**FULL SYLLABUS**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಜೂನ್ 2024 ರ ಪರೀಕ್ಷೆ - 2

**JUNE 2024 EXAMINATION - 2**

ಮಾದರಿ ಉತ್ತರಗಳು

**MODEL ANSWERS**

ಸಂಕೇತ ಸಂಖ್ಯೆ : **85-K** CODE NO. : **85-K**

## ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)

**(Regular Repeater / Private Repeater / Private Fresh / NSR / NSPR)**

ದಿನಾಂಕ : 22. 06. 2024 ] [ ಗರಿಷ್ಠ ಅಂಕಗಳು : 80

Date : 22. 06. 2024 ] [ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| I. | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : $8 \times 1 = 8$ | |
| 1. | ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು<br>(A) ವಾರನ್ ಹೇಸ್ಟಿಂಗ್ಸ್ (B) ಕಾರ್ನ್‌ವಾಲೀಸ್<br>(C) ವೆಲ್ಲೆಸ್ಲಿ (D) ಡಾಲ್‌ಹೌಸಿ<br>*ಉತ್ತರ :* (B) ಕಾರ್ನ್‌ವಾಲೀಸ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | ಎರಡನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಮುಖ್ಯ ಕಾರಣ<br>(A) ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು<br>(B) ಬ್ರಿಟಿಷರು ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದು<br>(C) ಬ್ರಿಟಿಷರು ಕಾರವಾರ ಮತ್ತು ಕೊಯಮತ್ತೂರುಗಳನ್ನು ವಶಪಡಿಸಿಕೊಂಡದ್ದು<br>(D) ಬ್ರಿಟಿಷರು ಮಂಗಳೂರು ಒಪ್ಪಂದದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದು<br>***ಉತ್ತರ :*** (A) ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು | 1 |
| 3. | ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ಕಛೇರಿ ಇರುವುದು<br>(A) ನ್ಯೂಯಾರ್ಕ್‌ನಲ್ಲಿ (B) ಪ್ಯಾರಿಸ್‌ನಲ್ಲಿ<br>(C) ರೋಮ್‌ನಲ್ಲಿ (D) ಜಿನೇವಾದಲ್ಲಿ<br>***ಉತ್ತರ :*** (D) ಜಿನೇವಾದಲ್ಲಿ | 1 |
| 4. | ಭಾರತದ ಚಹಾದ ಬಂದರು<br>(A) ವಿಶಾಖಪಟ್ಟಣ (B) ಮರ್ಮ ಗೋವಾ<br>(C) ಕೋಲ್ಕತ್ತಾ (D) ಮುಂಬಯಿ<br>***ಉತ್ತರ :*** (C) ಕೋಲ್ಕತ್ತಾ | 1 |
| 5. | ಸಂವಿಧಾನದ 17ನೇ ವಿಧಿಯ ಮಹತ್ವ<br>(A) ಬಾಲಕಾರ್ಮಿಕರ ನಿಷೇಧ (B) ಅಸ್ಪೃಶ್ಯತೆಯ ನಿವಾರಣೆ<br>(C) ಅನಕ್ಷರತೆಯ ನಿವಾರಣೆ (D) ವರದಕ್ಷಿಣೆಯ ನಿಷೇಧ<br>***ಉತ್ತರ :*** (B) ಅಸ್ಪೃಶ್ಯತೆಯ ನಿವಾರಣೆ | 1 |
| 6. | ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು<br>(A) ಬಾಬಾ ಆಮ್ಟೆ ಮತ್ತು ಮೇಧಾ ಪಾಟ್ಕರ್<br>(B) ಸುಂದರ್‌ಲಾಲ್ ಬಹುಗುಣ ಮತ್ತು ಚಂಡಿಪ್ರಸಾದ್ ಭಟ್ಟ<br>(C) ಡಾ. ಶಿವರಾಮ ಕಾರಂತ ಮತ್ತು ಕುಸುಮ ಸೊರಬ<br>(D) ಕರ್ವೆ ಮತ್ತು ಶ್ಯಾಮಾಜಿ ಕೃಷ್ಣವರ್ಮ<br>***ಉತ್ತರ :*** (A) ಬಾಬಾ ಆಮ್ಟೆ ಮತ್ತು ಮೇಧಾ ಪಾಟ್ಕರ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 7. | ಭಾರತದ ಹಸಿರು ಕ್ರಾಂತಿಯ ಪಿತಾಮಹ<br>(A) ವರ್ಗೀಸ್ ಕುರಿಯನ್ (B) ಡಾ. ಎಂ.ಎಸ್. ಸ್ವಾಮಿನಾಥನ್<br>(C) ಅಮರ್ತ್ಯ ಸೇನ್ (D) ಡಾ. ನಾರ್ಮನ್ ಬೋರ್ಲಾಗ್<br>**ಉತ್ತರ :** (B) ಡಾ. ಎಂ.ಎಸ್. ಸ್ವಾಮಿನಾಥನ್ | 1 |
| 8. | ರಮೇಶ ಎಂಬ ವ್ಯಕ್ತಿಗೆ ಐದು ವರ್ಷದ ಮಗಳಿದ್ದಾಳೆ. ಆತನು ಭವಿಷ್ಯದಲ್ಲಿ ಅವಳ ವಿವಾಹಕ್ಕೆ ಹಣವನ್ನು ಉಳಿತಾಯ ಮಾಡಲು ನಿರ್ಧರಿಸುತ್ತಾನೆ. ಹಾಗಾದರೆ ಅವನು ತೆರೆಯಬೇಕಾದ ಸೂಕ್ತವಾದ ಬ್ಯಾಂಕ್ ಖಾತೆ<br>(A) ಉಳಿತಾಯ ಖಾತೆ (B) ಚಾಲ್ತಿ ಖಾತೆ<br>(C) ಆವರ್ತ ಠೇವಣಿ ಖಾತೆ (D) ನಿಶ್ಚಿತ ಠೇವಣಿ ಖಾತೆ<br>**ಉತ್ತರ :** (C) ಆವರ್ತ ಠೇವಣಿ ಖಾತೆ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು : $8 \times 1 = 8$** | |
| 9. | 'ಸತ್ಯಾರ್ಥ ಪ್ರಕಾಶ' ಎಂಬ ಕೃತಿಯನ್ನು ರಚಿಸಿದವರು ಯಾರು ?<br>**ಉತ್ತರ :**<br>ದಯಾನಂದ ಸರಸ್ವತಿ | 1 |
| 10. | ಇಲ್ಬರ್ಟ್ ಮಸೂದೆಯ ಮೂಲ ಉದ್ದೇಶವೇನು ?<br>**ಉತ್ತರ :**<br>ಏಕರೂಪದ ಕಾನೂನು ವ್ಯವಸ್ಥೆ ಜಾರಿ. | 1 |
| 11. | ಸಾಮಾಜಿಕ ಸ್ತರವಿನ್ಯಾಸವು ಹೇಗೆ ರೂಪುಗೊಂಡಿದೆ ?<br>**ಉತ್ತರ :**<br>ಜನರ ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಇತ್ಯಾದಿಗಳ ಆಧಾರದಿಂದ. | 1 |
| 12. | ನಿಶ್ಶಸ್ತ್ರೀಕರಣ ಎಂದರೇನು ?<br>**ಉತ್ತರ :**<br>ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ಪ್ರಕ್ರಿಯೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 13. | ಪೆಟ್ರೋಲಿಯಂ ಅನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾಗಿದೆ. ಏಕೆ ?<br>***ಉತ್ತರ :***<br>ಪೆಟ್ರೋಲಿಯಂ ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. | 1 |
| 14. | ಮಳೆನೀರು ಕೊಯ್ಲು ಏಕೆ ಅವಶ್ಯಕವಾಗಿದೆ ?<br>***ಉತ್ತರ :***<br>— ದೇಶದಲ್ಲಿ ಕಂಡುಬರುತ್ತಿರುವ ಜಲಕ್ಷಾಮದ ಪರಿಹಾರಕ್ಕೆ<br>— ಅಂತರ್ಜಲ ಸಂರಕ್ಷಿಸಲು | 1 |
| 15. | ಅಧಿಕಾರ ವಿಕೇಂದ್ರೀಕರಣ ಎಂದರೇನು ?<br>***ಉತ್ತರ :***<br>ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸುವುದು. | 1 |
| 16. | ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ ?<br>***ಉತ್ತರ :***<br>ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ಹಾಗೂ ಸಮಗ್ರತೆಯನ್ನು ಕೇಂದ್ರೀಕರಿಸಲು. | 1 |
| **III.** | ***ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು :*** **8 × 2 = 16** | |
| 17. | ಕಾಮನ್‌ವೆಲ್ತ್ ರಾಷ್ಟ್ರ ಸಂಘದ ರಚನೆ ಮಾಡಿದ್ದು ಏಕೆ ?<br>***ಅಥವಾ***<br>ಲಾಭಕೋರತನವನ್ನು ನಾವು ಹೇಗೆ ನಿಯಂತ್ರಿಸಬಹುದು ?<br>***ಉತ್ತರ :***<br>— ಪ್ರಜಾತಂತ್ರವನ್ನು ಎತ್ತಿಹಿಡಿಯುವುದು<br>— ಸ್ವಾತಂತ್ರ್ಯದ ಸಂರಕ್ಷಣೆ<br>— ಬಡತನ ನಿರ್ಮೂಲನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ವಿಶ್ವಶಾಂತಿ ನೆಲೆಗೊಳಿಸುವಿಕೆ<br>— ಕ್ರೀಡೆ, ವಿಜ್ಞಾನ ಹಾಗೂ ಕಲೆಯ ಬೆಳವಣಿಗೆ<br>— ಪರಸ್ಪರ ಸದಸ್ಯ ರಾಷ್ಟ್ರಗಳ ಮೈತ್ರಿಯನ್ನು ಬಲಪಡಿಸುವುದು<br>(ಯಾವುದಾದರೂ ನಾಲ್ಕು) 4 × ½ | 2 |
| | **ಅಥವಾ**<br>— ಕಟ್ಟುನಿಟ್ಟಿನ ಸರ್ಕಾರಿ ನಿಯಂತ್ರಣ<br>— ಬೆಲೆ ಸೂಚ್ಯಾಂಕಗಳು ಪರಿಶೀಲನೆ<br>— ಸಹಕಾರಿ ಮಾರುಕಟ್ಟೆಗಳ ವಿಸ್ತರಣೆ<br>— ಸರಿಯಾದ ತೆರಿಗೆ ಧೋರಣೆ<br>4 × ½ | 2 |
| 18. | ಅಪ್ಪಿಕೋ ಚಳವಳಿಯನ್ನು ವಿವರಿಸಿ.<br>**ಅಥವಾ**<br>ಬಾಲ್ಯವಿವಾಹದ ದುಷ್ಪರಿಣಾಮಗಳನ್ನು ವಿವರಿಸಿ.<br>***ಉತ್ತರ :***<br>— ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರಿಂದ 1983 ರಲ್ಲಿ ಆರಂಭ<br>— ಕಲಸೆ ಅರಣ್ಯದಲ್ಲಿ ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ರೈತರ ಪ್ರತಿಭಟನೆ<br>— ಮರಗಳ ಕಳ್ಳಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸುವುದು<br>— ಪರಿಸರ ಮಹತ್ವದ ಬಗ್ಗೆ ಅರಿವು<br>4 × ½ | 2 |
| | **ಅಥವಾ**<br>— ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತ<br>— ಪ್ರಶ್ನಿಸುವ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾರೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | — ಅತಿಯಾದ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ<br>— ಮಕ್ಕಳ ಹಕ್ಕುಗಳ ಉಲ್ಲಂಘನೆ<br>— ಬಾಲ್ಯ, ಶಿಕ್ಷಣ, ಮನೋರಂಜನೆ, ಗೆಳೆಯರ ಒಡನಾಟಕ್ಕೆ ದಕ್ಕೆ<br>— ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, ಗರ್ಭಪಾತ, ಶಿಶುಮರಣ, ತಾಯಿ ಮರಣಗಳ ಹೆಚ್ಚಳ<br>— ಹೆಣ್ಣು ಮಕ್ಕಳು ಚಿಕ್ಕವಯಸ್ಸಿನಲ್ಲಿ ವಿಧವೆಯಾಗುವ ಸಂಭವ<br>(ಯಾವುದಾದರೂ ನಾಲ್ಕು) 4 × ½ | 2 |
| 19. | ಮೊದಲನೆಯ ಮಹಾಯುದ್ಧದ ಪರಿಣಾಮಗಳೇನು ?<br>***ಉತ್ತರ :***<br>— 1919 ರಲ್ಲಿ ವರ್ಸೇಲ್ಸ್ ಒಪ್ಪಂದ<br>— ಆಸ್ಟ್ರೋ-ಹಂಗೇರಿ ಮತ್ತು ಆಟೋಮನ್ ಸಾಮ್ರಾಜ್ಯಗಳು ಅಸ್ತಿತ್ವ ಕಳೆದುಕೊಂಡವು<br>— ಜರ್ಮನಿ ತನ್ನ ಪ್ರದೇಶಗಳನ್ನು ಕಳೆದುಕೊಂಡಿತು<br>— ಯುರೋಪಿನ ಭೂಪಟದಲ್ಲಿ ಬದಲಾವಣೆ<br>— ಹಲವು ಸಣ್ಣ ಸ್ವತಂತ್ರ ರಾಷ್ಟ್ರಗಳ ಅಸ್ತಿತ್ವ<br>— ರಾಷ್ಟ್ರ ಸಂಘದ ರಚನೆ<br>— ಉಗ್ರ ರಾಷ್ಟ್ರೀಯತೆಗೆ ಕಾರಣ<br>— ಜರ್ಮನಿಯ ಮೇಲೆ ಹೇರಲಾದ ಯುದ್ಧ ನಷ್ಟ ಪರಿಹಾರದಿಂದ ಅಲ್ಲಿನ ಜನರ ಮೇಲೆ ಪರಿಣಾಮ<br>— ನಿರುದ್ಯೋಗ, ಬಡತನ, ಬೆಳವಣಿಗೆ ಕುಸಿತ<br>— ಜರ್ಮನ್ ಕೈಗಾರಿಕೋದ್ಯಮಿಗಳ ಲಾಭಕೋರತನ<br>— ಸರ್ವಾಧಿಕಾರಿಗಳ ಬೆಳವಣಿಗೆ<br>— ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ಅಮೆರಿಕಾದ ಶಸ್ತ್ರಾಸ್ತ್ರ ತಯಾರಿಸುವ ವ್ಯಾಪಾರಸ್ಥರಿಗೆ ಅಪಾರ ಲಾಭ<br>(ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಜುನಾಗಢ್ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು ?<br>**ಉತ್ತರ :**<br>— ಜುನಾಗಢ್ ನವಾಬ ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದ್ದನು<br>— ನವಾಬನ ವಿರುದ್ಧ ಪ್ರಜೆಗಳು ಬೀದಿಗಿಳಿದರು<br>— ನವಾಬ ರಾಜ್ಯಬಿಟ್ಟು ಪಲಾಯನ<br>— ಅಲ್ಲಿನ ದಿವಾನರ ಮನವಿಯಂತೆ ಸೈನ್ಯ ರವಾನೆ<br>— 1949 ರಲ್ಲಿ ಜುನಾಗಢ್ ಭಾರತದ ಒಕ್ಕೂಟಕ್ಕೆ ಸೇರ್ಪಡೆ<br>(ಯಾವುದಾದರೂ ನಾಲ್ಕು) 4 × ½ | 2 |
| 21. | ಇತ್ತೀಚಿನ ವರ್ಷಗಳಲ್ಲಿ ಮಣ್ಣಿನ ಸವೆತವು ಅಧಿಕವಾಗುತ್ತಿದೆ. ಏಕೆ ?<br>**ಉತ್ತರ :**<br>— ಅರಣ್ಯನಾಶ<br>— ಹೆಚ್ಚು ಮೇಯಿಸುವುದು<br>— ಅವೈಜ್ಞಾನಿಕ ಬೇಸಾಯ<br>— ಅಧಿಕ ನೀರಾವರಿ ಬಳಕೆ<br>— ಇಟ್ಟಿಗೆ, ಹೆಂಚು ಮತ್ತು ಮಡಿಕೆಗಳ ತಯಾರಿಕೆ<br>— ಪ್ರವಾಹ<br>— ಭೂಕುಸಿತ<br>(ಯಾವುದಾದರೂ ನಾಲ್ಕು) 4 × ½ | 2 |
| 22. | ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟ'ವಾಗಿದೆ. ಹೇಗೆ ?<br>**ಉತ್ತರ :**<br>— ಭಾರತದ ಜನತೆಯ ಪ್ರಧಾನ ಉದ್ಯೋಗ ವ್ಯವಸಾಯ<br>— ಮಾನ್ಸೂನ್ ಮಾರುತಗಳು ವ್ಯವಸಾಯವನ್ನು ನಿಯಂತ್ರಿಸುತ್ತವೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಮಳೆ ವಿಫಲವಾದರೆ ಬರಗಾಲ<br>— ಮಳೆ ಹೆಚ್ಚಾದಾಗ ಪ್ರವಾಹ, ಪ್ರಾಣಹಾನಿ ಮತ್ತು ಆಸ್ತಿಗಳಿಗೆ ಹಾನಿ<br>— ಮಳೆ ಅನಿಶ್ಚಿತ, ಅಕಾಲಿಕ, ಅನಿಯಮಿತ, ಅಸಮಾನವಾಗಿ ಹಂಚಿಕೆಯಾಗಿದೆ.<br>(ಯಾವುದಾದರೂ ನಾಲ್ಕು) 4 × ½ | 2 |
| 23. | ಸಾರ್ವಜನಿಕ ಹಣಕಾಸಿಗಿಂತ ವೈಯಕ್ತಿಕ ಹಣಕಾಸು ಹೇಗೆ ಭಿನ್ನವಾಗಿದೆ ?<br>***ಉತ್ತರ :*** | |

| ವೈಯಕ್ತಿಕ ಹಣಕಾಸು | ಸಾರ್ವಜನಿಕ ಹಣಕಾಸು |
|---|---|
| — ವ್ಯಕ್ತಿ / ಕುಟುಂಬದ ಆದಾಯ-ವೆಚ್ಚಗಳಿಗೆ ಸಂಬಂಧಿಸಿದೆ | — ಸರ್ಕಾರದ ಆದಾಯ-ವೆಚ್ಚಗಳಿಗೆ ಸಂಬಂಧಿಸಿದೆ |
| — ವ್ಯಕ್ತಿಗಳು ಮೊದಲು ಆದಾಯವನ್ನು ಅಂದಾಜುಮಾಡಿ, ವೆಚ್ಚ ಮಾಡುತ್ತಾರೆ | — ಸರ್ಕಾರ ಮೊದಲು ವೆಚ್ಚ ಮಾಡಿ ಅದಕ್ಕೆ ತಕ್ಕಂತೆ ಆದಾಯ ಹೊಂದಿಸುತ್ತದೆ |
| — ಗೌಪ್ಯವಾಗಿಡಲಾಗುತ್ತದೆ | — ಶಾಸನ ಸಭೆಗಳಲ್ಲಿ ಚರ್ಚಿಸಲಾಗುತ್ತದೆ |
| — ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕ | — ಉಳಿತಾಯ ಮಾಡಿದರೆ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ |

| | | |
|---|---|---|
| | 2 × 1 | 2 |
| 24. | ಪ್ರತಿವರ್ಷವು ಮಾರ್ಚ್ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ. ಏಕೆ ?<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ವಿಶ್ವಗ್ರಾಹಕರ ಆಂದೋಲನದಲ್ಲಿ ಮಾರ್ಚ್ 15, 1962 ಮಹತ್ವದ ದಿನ<br>— ಅಮೆರಿಕಾದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿಯವರು ಅಲ್ಲಿನ ನಾಗರಿಕರಿಗೆ ಸಂರಕ್ಷಣೆ, ಮಾಹಿತಿ, ನಿವೇದನೆ ಮತ್ತು ಪರಿಹಾರದ ಹಕ್ಕುಗಳನ್ನು ನೀಡಿದರು. | 2 |
| **IV.** | **ಆರು ವಾಕ್ಯಗಳಲ್ಲಿ ಉತ್ತರಿಸುವುದು : 9 × 3 = 27** | |
| 25. | ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯು ಮೈಸೂರನ್ನು ಮಾದರಿ ರಾಜ್ಯವನ್ನಾಗಿ ಮಾಡಿತು. ಸಮರ್ಥಿಸಿ.<br>**ಅಥವಾ**<br>ಭಾರತದ ಸಾಮಾಜಿಕ ಸುಧಾರಣೆಯಲ್ಲಿ ರಾಜಾ ರಾಮ್‌ಮೋಹನ್ ರಾಯ್‌ರ ಪಾತ್ರವು ಸ್ಮರಣೀಯವಾದುದು. ಸಮರ್ಥಿಸಿ.<br>*ಉತ್ತರ :*<br>— ಇವರು ವಿದ್ಯಾಭ್ಯಾಸವನ್ನು ವ್ಯಾಪಕವಾಗಿ ಹರಡಲು ಆಸಕ್ತರಾಗಿದ್ದರು<br>— ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಶುಲ್ಕ ರದ್ದು<br>— ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೆರವು<br>— ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ<br>— ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪದ್ಧತಿ ಆರಂಭ<br>— ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆ<br>— ನೀರಾವರಿ ಸೌಲಭ್ಯ<br>— ಹೊಸ ರೈಲು ಮಾರ್ಗಗಳ ನಿರ್ಮಾಣ<br>— ಅನೇಕ ದೊಡ್ಡ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ<br>— ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ ಸ್ಥಾಪನೆ<br>— ಮೈಸೂರು ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರು ಸಾಬೂನು ಕಾರ್ಖಾನೆ, ಬೆಳಗೊಳದ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರ ಕಾರ್ಖಾನೆ ಸ್ಥಾಪನೆ<br>— ನ್ಯಾಯ ವಿಧಾಯಕ ಸಭೆಯ ರಚನೆ<br>— ಸಂಗೀತ ವಿದ್ವಾಂಸರುಗಳಿಗೆ ಪ್ರೋತ್ಸಾಹ<br>— ಮಹಾತ್ಮ ಗಾಂಧೀಜಿಯವರಿಂದ ರಾಜರ್ಷಿ ಎಂಬ ಗೌರವ<br>(ಯಾವುದಾದರೂ ಆರು) $6 \times \frac{1}{2}$ | 3 |
| | **ಅಥವಾ** | |
| | — ಬ್ರಹ್ಮ ಸಮಾಜದ ಸಂಸ್ಥಾಪಕರು<br>— ಭಾರತೀಯ ನವೋದಯದ ಜನಕ<br>— ಸಂಸ್ಕೃತ, ಅರೆಬಿಕ್, ಪರ್ಷಿಯನ್, ಇಂಗ್ಲಿಷ್, ಫ್ರೆಂಚ್, ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಪಾಂಡಿತ್ಯ<br>— ಮೂರ್ತಿ ಪೂಜೆಯನ್ನು ಪ್ರಶ್ನಿಸಿದರು<br>— ಆಧುನಿಕ ವಿಜ್ಞಾನ ಮತ್ತು ಇಂಗ್ಲಿಷ್ ಶಿಕ್ಷಣದ ಪ್ರತಿಪಾದನೆ<br>— ಸ್ತ್ರೀ ಶೋಷಣೆಗೆ ವಿರೋಧ<br>— ಸತಿ ಪದ್ಧತಿ, ಬಾಲ್ಯ ವಿವಾಹಗಳ ವಿರುದ್ಧ ಸಂಘಟನಾತ್ಮಕ ಹೋರಾಟ<br>— ವಿಲಿಯಂ ಬೆಂಟಿಂಕ್ ಜಾರಿಗೆ ತಂದಿದ್ದ ಸತಿ ಸಹಗಮನ ಪದ್ಧತಿ ವಿರುದ್ಧ ಕಾಯ್ದೆಗೆ ಬೆಂಬಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಪತ್ರಿಕೋದ್ಯಮದ ಮೂಲಕ ಜನರಲ್ಲಿ ವೈಚಾರಿಕತೆ ಬೆಳೆಸಲು ಯತ್ನ<br>— ಸಂವಾದ ಕೌಮುದಿ ಪತ್ರಿಕೆ ಆರಂಭ<br>— ಏಕ ದೇವತಾರಾಧನೆಗೆ ಪ್ರೋತ್ಸಾಹ<br>— ಯಜ್ಞಯಾಗಾದಿಗಳ ಖಂಡನೆ<br>(ಯಾವುದಾದರೂ ಆರು) 6 × ½ | 3 |
| 26. | ಭೂ ಬಳಕೆಯ ಮೇಲೆ ಪ್ರಭಾವಬೀರುವ ಅಂಶಗಳನ್ನು ಪಟ್ಟಿ ಮಾಡಿ.<br>**ಅಥವಾ**<br>ಭಾರತದ ಕೈಗಾರಿಕಾ ವಲಯಗಳನ್ನು ಪಟ್ಟಿ ಮಾಡಿ.<br>***ಉತ್ತರ :***<br>— ಭೂಸ್ವರೂಪಗಳು<br>— ವಾಯುಗುಣ<br>— ಮಣ್ಣಿನ ಲಕ್ಷಣಗಳು<br>— ಭೂಹಿಡುವಳಿ<br>— ಜನಸಂಖ್ಯೆ<br>— ವ್ಯವಸಾಯೋತ್ಪನ್ನಗಳ ಬೇಡಿಕೆ<br>— ಉದ್ಯೋಗ<br>— ಜನರ ಮನೋಭಾವ<br>— ಸಾಮಾಜಿಕ ಪರಿಸ್ಥಿತಿ<br>— ಮಾರುಕಟ್ಟೆ ಸೌಲಭ್ಯಗಳು<br>— ತಾಂತ್ರಿಕತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ನೀರಾವರಿ ಸೌಲಭ್ಯ<br>— ಮಾನವನ ಸಾಮರ್ಥ್ಯ<br>— ಭೂ ಒಡೆತನ<br>(ಯಾವುದಾದರೂ ಆರು) $6 \times \frac{1}{2}$ | 3 |
| | **ಅಥವಾ** | |
| | — ಹೂಗ್ಲಿ ಪ್ರದೇಶ<br>— ಮುಂಬೈ-ಪುಣೆ ಪ್ರದೇಶ<br>— ಅಹಮದಾಬಾದ್-ವಡೋದರ ಪ್ರದೇಶ<br>— ದಾಮೋದರ ಕಣಿವೆ ಪ್ರದೇಶ<br>— ದಕ್ಷಿಣದ ಕೈಗಾರಿಕಾ ಪ್ರದೇಶ<br>— ನ್ಯಾಷನಲ್ ಕ್ಯಾಪಿಟಲ್ ಪ್ರದೇಶ<br>— ವಿಶಾಖಪಟ್ಟಣ-ಗುಂಟೂರು ಪ್ರದೇಶ<br>— ಕೊಲ್ಲಂ-ತಿರುವನಂತಪುರ ಪ್ರದೇಶ<br>(ಯಾವುದಾದರೂ ಆರು) $6 \times \frac{1}{2}$ | 3 |
| 27. | ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಮಹತ್ವದ ಪಾತ್ರವಹಿಸುತ್ತವೆ. ದೃಢೀಕರಿಸಿ. | |
| | **ಅಥವಾ** | |
| | ಭಾರತದ ಅಭಿವೃದ್ಧಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಮಹತ್ವದ ಪಾತ್ರವಹಿಸಿವೆ. ಹೇಗೆ ? | |
| | ***ಉತ್ತರ :*** | |
| | — ಗ್ರಾಮೀಣಾಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿದೀಪಗಳು ಶೌಚಾಲಯ ಸೌಲಭ್ಯ | |
| | — ಶಾಲೆ ಮತ್ತು ಆಸ್ಪತ್ರೆಯ ಕಟ್ಟಡಗಳು | |
| | — ಮಾರುಕಟ್ಟೆ ಸೌಲಭ್ಯ | |
| | — ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | |
| | — ವಯಸ್ಕ ಶಿಕ್ಷಣ ಮತ್ತು ತಾಂತ್ರಿಕ ಹಾಗೂ ವೃತ್ತಿಪರ ತರಬೇತಿ | |
| | — ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯ | |
| | — ಕೃಷಿ, ಪಶುಪಾಲನೆ ಸಾಮಾಜಿಕ ಅರಣ್ಯಗಳ ಅಭಿವೃದ್ಧಿ | |
| | — ಕೆರೆಕಟ್ಟೆಗಳ ನಿರ್ಮಾಣ, ನೀರಾವರಿ ಸೌಲಭ್ಯ | |
| | — ಗ್ರಾಮೀಣ ಮತ್ತು ಗುಡಿಕೈಗಾರಿಕೆಗಳ ಅಭಿವೃದ್ಧಿ | |
| | — ಆಹಾರ ಸಂಸ್ಕರಣಾ ಘಟಕಗಳು | |
| | — ಉದ್ಯೋಗ ನಿರ್ಮಾಣ | |
| | — ಬಡತನ ನಿರ್ಮೂಲನೆ | |
| | — ವಸತಿ ಯೋಜನೆಗಳು | |
| | — ಆಹಾರ ಧಾನ್ಯಗಳ ಪೂರೈಕೆ | |
| | — ಸಮಾಜ ಕಲ್ಯಾಣ ಯೋಜನೆಗಳು | |
| | — ಮಹಿಳಾ ಸ್ವ-ಸಹಾಯ ಸಂಘಗಳಿಗೆ ಪ್ರೋತ್ಸಾಹ | |
| | — ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು | |
| | (ಯಾವುದಾದರೂ ಆರು) $6 \times \frac{1}{2}$ | 3 |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ<br>— ತಲಾ ಆದಾಯದಲ್ಲಿ ಹೆಚ್ಚಳ<br>— ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆ<br>— ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ<br>— ಉದ್ಯೋಗಾವಕಾಶಗಳ ಹೆಚ್ಚಳ<br>— ಬಡತನ ನಿರ್ಮೂಲನೆ<br>— ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳು<br>— ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿ<br>— ಕೃಷಿ, ಕೈಗಾರಿಕೆ ಮತ್ತು ಸೇವಾಲಯಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ<br>— ತಯಾರಿಕಾ ಮತ್ತು ಎಂಜಿನಿಯರಿಂಗ್ ಸರಕುಗಳ ರಫ್ತು ಹೆಚ್ಚಳ<br>— ಜನರ ನಿರೀಕ್ಷಿತ ಜೀವಿತಾವಧಿ ಮತ್ತು ಸಾಕ್ಷರತೆ ಪ್ರಮಾಣದ ಹೆಚ್ಚಳ<br>— ಶಿಶುಮರಣ ಮತ್ತು ತಾಯಂದಿರ ಮರಣ ದರದಲ್ಲಿ ಇಳಿಕೆ<br>— ಜನನ ಮತ್ತು ಮರಣ ದರದಲ್ಲಿ ಇಳಿಕೆ<br>— ಜನಸಂಖ್ಯಾ ಬೆಳವಣಿಗೆ ದರದಲ್ಲಿ ಇಳಿಕೆ<br>(ಯಾವುದಾದರೂ ಆರು) $6 \times \frac{1}{2}$ | 3 |
| 28. | ಬ್ಯಾಂಕ್‌ಗಳು ನಿರ್ವಹಿಸುವ ಕಾರ್ಯಗಳಾವವು ?<br>**ಅಥವಾ**<br>ಉದ್ಯಮಿಯ ಕಾರ್ಯಗಳಾವವು ?<br>***ಉತ್ತರ :***<br>— ಠೇವಣಿಗಳ ಅಂಗೀಕಾರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಸಾಲಗಳನ್ನು ಕೊಡುವುದು | |
| | — ಹಣದ ವರ್ಗಾವಣೆ | |
| | — ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು | |
| | — ಹುಂಡಿಗಳನ್ನು ಸೋಡಿ ಮಾಡುವುದು | |
| | — ಭದ್ರತಾ ಕಪಾಟುಗಳು | |
| | — ವಿದೇಶಿ ವಿನಿಮಯದ ವ್ಯವಹಾರ | |
| | — ಬೆಲೆಬಾಳುವ ವಸ್ತುಗಳ ಸುಪರ್ಧಿ | |
| | — ಸಾಲಪತ್ರ ಮತ್ತು ಜವಾಬ್ದಾರಿ ಪತ್ರಗಳು | |
| | — ಸರ್ಕಾರದ ಹಣಕಾಸಿನ ವ್ಯವಹಾರ | |
| | (ಯಾವುದಾದರೂ ಆರು) $6 \times \frac{1}{2}$ | 3 |
| | **ಅಥವಾ** | |
| | — ವ್ಯಾಪಾರ ಚಟುವಟಿಕೆಗಳ ಆರಂಭ | |
| | — ಉತ್ಪಾದನಾಂಗಗಳ ಸಂಯೋಜನೆ | |
| | — ಉತ್ಪಾದಿಸುವ ವಸ್ತುಗಳು, ತಾಂತ್ರಿಕತೆ, ಮಾರುಕಟ್ಟೆ, ಉದ್ಯೋಗದ ಬಗ್ಗೆ ನಿರ್ಧಾರ | |
| | — ಎಲ್ಲಾ ಅಂಶಗಳ ಸಮಂಜಸ ಸಂಯೋಜನೆ | |
| | — ಹೊಸ ಹೊಸ ವಿಧಾನಗಳ ರೂಢಿ | |
| | — ಹಣಕಾಸಿನ ಆಯವ್ಯದ ನಿರ್ವಹಣೆ | |
| | — ಕಷ್ಟನಷ್ಟ ಮತ್ತು ಅನಿಶ್ಚಿತತೆಗಳನ್ನು ಎದುರಿಸುವುದು | |
| | — ಸೂಕ್ತ ಮಾರ್ಗದರ್ಶನ | |
| | (ಯಾವುದಾದರೂ ಆರು) $6 \times \frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು ಯಾವುವು ?<br>***ಉತ್ತರ :***<br>— ಬ್ರಿಟಿಷ್ ಸೈನಿಕ ತುಕಡಿಯನ್ನು ರಾಜ್ಯದಲ್ಲಿರಿಸಿಕೊಳ್ಳಬೇಕು<br>— ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚ ಭರಿಸುವುದು<br>— ಬ್ರಿಟಿಷ್ ರೆಸಿಡೆಂಟ್‌ನ ನೇಮಕ<br>— ಬ್ರಿಟಿಷರ ಅನುಮತಿ ಇಲ್ಲದೆ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ<br>— ಯಾವುದೇ ರಾಜ್ಯಗಳೊಂದಿಗೆ ಯುದ್ಧ / ಸಂಧಾನಕ್ಕೆ ಗವರ್ನರ್ ಜನರಲ್ ಸಮ್ಮತಿ<br>— ಆಂತರಿಕ ಮತ್ತು ಬಾಹ್ಯ ದಾಳಿಗಳಿಂದ ರಕ್ಷಣೆ<br>$6 \times \frac{1}{2}$ | 3 |
| 30. | ಪ್ಲಾಸಿ ಕದನಕ್ಕೆ ಕಾರಣಗಳು ಮತ್ತು ಅದರ ಫಲಿತಾಂಶಗಳನ್ನು ವಿವರಿಸಿ.<br>***ಉತ್ತರ :***<br>***ಕಾರಣಗಳು :***<br>— ದಸ್ತಕ್‌ಗಳ ದುರಪಯೋಗ<br>— ಅನುಮತಿ ಇಲ್ಲದೆ ಕೋಟೆಯ ದುರಸ್ಥಿ<br>— ಕಪ್ಪು ಕೋಣೆಯ ದುರಂತ $3 \times \frac{1}{2}$<br>***ಫಲಿತಾಂಶಗಳು :***<br>— ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆಯ ಪ್ರದರ್ಶನ<br>— ವ್ಯಾಪಾರಿ ವರ್ಗದ ಲೋಭಿತನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರದ ಅನಿರ್ಬಂಧಿತ ಹಕ್ಕು ಪಡೆಯಿತು<br>— ಮೀರ್ ಜಾಫರ್ ಬಂಗಾಳದ ನವಾಬ<br>— ಕಂಪನಿಗೆ 17 ಕೋಟಿ, 70 ಲಕ್ಷ ರೂಪಾಯಿಗಳ ಯುದ್ಧ ಪರಿಹಾರ<br>$3 \times \frac{1}{2}$ | 3 |
| 31. | ರಷ್ಯಾವು ಭಾರತಕ್ಕೆ ಹಲವು ಸಂದರ್ಭಗಳಲ್ಲಿ ಸಹಕರಿಸುತ್ತಾ ಬಂದಿದೆ. ಹೇಗೆ<br>***ಉತ್ತರ :***<br>— ಭಾರತದೊಂದಿಗೆ ಉತ್ತಮ ಬಾಂಧವ್ಯ<br>— 1962 ರಲ್ಲಿ ಚೈನಾ ದಾಳಿಯ ಖಂಡನೆ<br>— 1961 ರಲ್ಲಿ ಗೋವಾ ವಿಮೋಚನೆಗೆ ಸಹಾಯ<br>— 1966 ರಲ್ಲಿ ತಾಷ್ಕೆಂಟ್ ಒಪ್ಪಂದಕ್ಕೆ ಸಹಾಯ<br>— 1971 ರಲ್ಲಿ 20 ವರ್ಷಗಳ ಶಾಂತಿ, ಮೈತ್ರಿ ಮತ್ತು ಸಹಕಾರ ಒಪ್ಪಂದ<br>— ಭಿಲೈ ಹಾಗೂ ಬೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕಾರ<br>— ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಗೆ ಸಹಕಾರ<br>— ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ಬೆಂಬಲ<br>(ಯಾವುದಾದರೂ ಆರು) $6 \times \frac{1}{2}$ | 3 |
| 32. | ನಿರುದ್ಯೋಗ ಸಮಸ್ಯೆಗೆ ಪರಿಹಾರೋಪಾಯಗಳಾವುವು ?<br>***ಉತ್ತರ :***<br>— ಜನಸಂಖ್ಯಾ ನಿಯಂತ್ರಣ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ<br>— ಕೃಷಿ ಕ್ಷೇತ್ರದ ಅಭಿವೃದ್ಧಿ<br>— ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ<br>— ಶೈಕ್ಷಣಿಕ ಸುಧಾರಣಾ ಯೋಜನೆಗಳು<br>— ಪಂಚವಾರ್ಷಿಕ ಯೋಜನೆಗಳು<br>— ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ<br>— ಗ್ರಾಮೀಣಾಭಿವೃದ್ಧಿ ಯೋಜನೆಗಳು<br>— ಉದ್ಯೋಗ ಖಾತರಿ ಯೋಜನೆಗಳು<br>(ಯಾವುದಾದರೂ ಆರು) 6 × ½ | 3 |
| 33. | ಅರಣ್ಯ ಸಂರಕ್ಷಣಾ ವಿಧಾನಗಳನ್ನು ವಿವರಿಸಿ.<br>***ಉತ್ತರ :***<br>— ಕಾಡ್ಗಿಚ್ಚು ನಿಯಂತ್ರಣ<br>— ಅರಣ್ಯದ ಮರಗಳಿಗೆ ತಗಲುವ ರೋಗಗಳ ನಿಯಂತ್ರಣ<br>— ಸಸಿಗಳನ್ನು ನೆಡುವುದು<br>— ಬೀಜಗಳನ್ನು ಹರಡುವುದು<br>— ಕಾನೂನುಬಾಹಿರವಾಗಿ ಮರ ಕಡಿಯುವುದನ್ನು ನಿಯಂತ್ರಿಸುವುದು<br>— ಸಾಕು ಪ್ರಾಣಿಗಳ ಮೇಯಿಸುವಿಕೆಯ ನಿಯಂತ್ರಣ<br>— ಮರ ನೆಡಲು ಪ್ರೋತ್ಸಾಹ<br>— ಅರಣ್ಯ ಪ್ರಾಮುಖ್ಯತೆಯ ತಿಳುವಳಿಕೆ<br>— ಅರಣ್ಯ ಸಂರಕ್ಷಣೆಗೆ ಪ್ರೇರೇಪಿಸುವುದು<br>— ಸಾಮಾಜಿಕ ಅರಣ್ಯ ಯೋಜನೆ<br>(ಯಾವುದಾದರೂ ಆರು) 6 × ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| V. | **ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : 4 × 4 = 16** | |
| 34. | ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ. | |
| | **ಅಥವಾ** | |
| | ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳನ್ನು ವಿವರಿಸಿ. | |
| | ***ಉತ್ತರ :*** | |
| | — ಮಂದಗಾಮಿಗಳನ್ನು 'ರಾಜಕೀಯ ಭಿಕ್ಷುಕ' ರೆಂದು ಕರೆದರು | |
| | — ಮಂದಗಾಮಿಗಳ ಮೃದುಧೋರಣೆಯ ಟೀಕೆ | |
| | — ಅರಬಿಂದೋ ಘೋಷ್, ಬಿಪಿನ್ ಚಂದ್ರಪಾಲ್, ಲಾಲಲಜಪತ್ ರಾಯ್ ಮತ್ತು ಬಾಲಗಂಗಾಧರ ತಿಲಕರು ಪ್ರಮುಖ ತೀವ್ರಗಾಮಿಗಳು | |
| | — ಬಂಗಾಳದ ವಿಭಜನೆಗೆ ವಿರೋಧ | |
| | — ಸ್ವದೇಶಿ ಚಳವಳಿಯ ಆರಂಭ | |
| | — ವಿದೇಶಿ ವಸ್ತುಗಳ ಬಹಿಷ್ಕಾರ | |
| | — ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುವೆ ಎಂದು ತಿಲಕರ ಘೋಷಣೆ | |
| | — ಪೂರ್ಣ ಸ್ವರಾಜ್ಯದ ಗುರಿ | |
| | — ಜನಸಾಮಾನ್ಯರನ್ನು ಸಂಘಟಿಸಲು ಯತ್ನ | |
| | — ಧಾರ್ಮಿಕ ಆಚರಣೆಗಳು | |
| | — ಶಿವಾಜಿ ಜಯಂತಿ, ಗಣೇಶ ಉತ್ಸವ | |
| | — ಸ್ವಾತಂತ್ರ್ಯ ಹೋರಾಟಕ್ಕೆ ಕೇಸರಿ ಮತ್ತು ಮರಾಠ ಪತ್ರಿಕೆಗಳ ಬಳಕೆ | |
| | — ಕ್ರಾಂತಿಕಾರಕ ಬರೆವಣಿಗೆಗಳು | |
| | (ಯಾವುದಾದರೂ ಆರು) 8 × ½ | 4 |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಆಧುನಿಕತೆ, ಚಾತ್ಯತೀತತೆ, ಪ್ರಜಾಪ್ರಭುತ್ವ ವೈಜ್ಞಾನಿಕ ಆಲೋಚನೆಗಳು<br>— ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆ<br>— ವಿದ್ಯಾವಂತ ವರ್ಗ<br>— ವೃತ್ತಪತ್ರಿಕೆಗಳ ಉಗಮ<br>— ಸರ್ಕಾರದ ನೀತಿಗಳ ವಿಮರ್ಶೆ<br>— ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿ ಉಗಮ<br>— ಜೆ.ಎಸ್. ಮಿಲ್, ರೂಸೋ, ಮಾಂಟೆಸ್ಕ್ಯೂ ಚಿಂತನೆಗಳು<br>— ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯ ಪ್ರಭಾವ<br>— ಭಾರತೀಯ ಸಾಂಸ್ಕೃತಿಕ ಪರಂಪರೆಯ ಅರಿವು<br>— ಹೊಸ ತಲೆಮಾರುಗಳ ಸೃಷ್ಟಿ<br>(ಯಾವುದಾದರೂ ಆರು) 8 × ½ | 4 |
| 35. | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು. ಸ್ಪಷ್ಟೀಕರಿಸಿ.<br>***ಉತ್ತರ :***<br>— ಇದು ಇಡೀ ದೇಶದಾದ್ಯಂತ ವ್ಯಾಪಿಸಿರಲಿಲ್ಲ<br>— ಸ್ವಹಿತಾಸಕ್ತಿ<br>— ಯೋಜಿತ ದಂಗೆಯಾಗಿರಲಿಲ್ಲ<br>— ಬ್ರಿಟಿಷ್ ಸೈನಿಕರಲ್ಲಿನ ಒಗ್ಗಟ್ಟು<br>— ಭಾರತೀಯ ಸೈನಿಕರಲ್ಲಿನ ಒಗ್ಗಟ್ಟಿನ ಕೊರತೆ<br>— ಸೂಕ್ತ ಮಾರ್ಗದರ್ಶನದ ಕೊರತೆ<br>— ಸಂಘಟನೆಯ ಕೊರತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಯುದ್ಧತಂತ್ರ, ಪರಿಣತಿಯ ಕೊರತೆ<br>— ಸೂಕ್ತ ಸೇನಾ ನಾಯಕತ್ವದ ಕೊರತೆ<br>— ಶಿಸ್ತಿನ ಕೊರತೆ<br>— ನಿಶ್ಚಿತ ಗುರಿ ಇರಲಿಲ್ಲ<br>— ಹಲವಾರು ದೇಶೀಯ ಸಂಸ್ಥಾನಗಳು ಬ್ರಿಟಿಷರಿಗೆ ತೋರಿದ ನಿಷ್ಠೆ<br>— ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳಿಂದ ಜನರ ವಿಶ್ವಾಸ ಕಳೆದುಕೊಂಡಿದ್ದು<br>(ಯಾವುದಾದರೂ ಆರು) 8 × ½ | 4 |
| 36. | ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವವು ?<br>**ಉತ್ತರ :**<br>— ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>— ಮಹಿಳೆಯರ ಆರೋಗ್ಯ<br>— ಮಹಿಳಾ ಶಿಕ್ಷಣ<br>— ಬಾಲ್ಯವಿವಾಹ ನಿಷೇಧ<br>— ವರದಕ್ಷಿಣೆ ನಿಷೇಧ<br>— ಸ್ತ್ರೀ ಶಕ್ತಿ ಕಾರ್ಯಕ್ರಮ<br>— ಸ್ವ-ಉದ್ಯೋಗಕ್ಕೆ ಸಾಲ ಸೌಲಭ್ಯ ಮತ್ತು ಸಬ್ಸಿಡಿ<br>— ಮಹಿಳಾ ಮಂಡಲಗಳು<br>— ಯುವತಿ ಮಂಡಲಗಳು<br>— ಸ್ತ್ರೀಶಕ್ತಿ ಸಂಘಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | — ರಾಜ್ಯ ಮತ್ತು ರಾಷ್ಟ್ರಮಟ್ಟದ ಮಹಿಳಾ ಆಯೋಗಗಳು<br>— ರಾಜಕೀಯದಲ್ಲಿ ಮಹಿಳಾ ಮೀಸಲಾತಿ<br>— ಕರ್ನಾಟಕದಲ್ಲಿ ಶೇ. 33 ಮೀಸಲಾತಿ<br>— ಉದ್ಯೋಗಗಳಲ್ಲಿ ಮೀಸಲಾತಿ<br>(ಯಾವುದಾದರೂ ಆರು) | $8 \times ½$ | 4 |
| 37. | ಭೂಕಂಪಕ್ಕೆ ಕಾರಣಗಳು ಮತ್ತು ಅದರ ಪರಿಣಾಮಗಳನ್ನು ತಿಳಿಸಿ.<br>*ಉತ್ತರ :*<br>*ಕಾರಣಗಳು :*<br>— ಭೂಮಿಯ ಅಂತರಾಳದ ಶಿಲಾ ಫಲಕಗಳ ಚಲನೆ<br>— ಮ್ಯಾಗ್ಮವು ಒಂದೆಡೆಯಿಂದ ಇನ್ನೊಂದೆಡೆಗೆ ಸರಿಯುವುದು<br>— ನಗರೀಕರಣ<br>— ಅರಣ್ಯನಾಶ<br>— ಅಣೆಕಟ್ಟು ನಿರ್ಮಾಣ<br>— ಗಣಿಗಾರಿಕೆ | $4 \times ½$ | |
| | *ಪರಿಣಾಮಗಳು :*<br>— ಜನರ ಸಾವು–ನೋವು ಮತ್ತು ಆಸ್ತಿಗಳ ಹಾನಿ<br>— ಸಾರಿಗೆ ಸಂಪರ್ಕ ಕಡಿತ<br>— ರೋಗಗಳ ಹರಡುವಿಕೆ<br>— ಸಾಗರದ ಅಲೆಗಳ ಅಪ್ಪಳಿಸುವಿಕೆ<br>— ಸುನಾಮಿ<br>— ನದಿ ದಿಕ್ಕು ಬದಲಾವಣೆ | $4 \times ½$ | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **VI.** 38. | ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : **1 + 4 = 5** | |


a) $23\frac{1}{2}^{o}$ ಉತ್ತರ ಅಕ್ಷಾಂಶ

b) ಕೊಂಕಣ ತೀರ

c) ಹಿರಾಕುಡ್ ಯೋಜನೆ

d) ಅಮೃತ್‌ಸರ್

***ಉತ್ತರ :***



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:*** <br> ***(ಪ್ರಶ್ನೆ ಸಂಖ್ಯೆ 38 ರ ಬದಲಿಗೆ)*** <br> ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. <br> — ನೀರಾವರಿ ಸೌಲಭ್ಯ <br> — ಜಲವಿದ್ಯುಚ್ಛಕ್ತಿ ಉತ್ಪಾದನೆ <br> — ಪ್ರವಾಹಗಳ ನಿಯಂತ್ರಣ <br> — ನೌಕಾಯಾನ <br> — ಗೃಹ ಬಳಕೆಗೆ ನೀರು <br> — ಕೈಗಾರಿಕೆಗೆ ನೀರು <br> — ಮಣ್ಣಿನ ಸವಕಳಿ ನಿಯಂತ್ರಣ <br> — ಒಳನಾಡಿನ ನೌಕಾಯಾನ <br> — ಮೀನುಗಾರಿಕೆ ವೃದ್ಧಿ <br> — ಅರಣ್ಯ ಸಂಪತ್ತು ವೃದ್ಧಿ <br> — ಮನರಂಜನೆ $10 \times \frac{1}{2}$ | 5 |